# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತನೆಯ ಅಧಿವೇಶನ

**ಕಾರ್ಯಕಲಾಪಗಳ ಪಟ್ಟಿ**

**ಶುಕ್ರವಾರ, ದಿನಾಂಕ:14ನೇ ಜುಲೈ, 2023**

**(ಸಮಯ: ಬೆಳಗ್ಗೆ: 10.00 ಗಂಟೆಗೆ)**

* * *

## 01. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಒಂಭತ್ತನೆಯ ಪಟ್ಟಿ

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಒಂಭತ್ತನೆಯ ಪಟ್ಟಿ

## 02. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ದಿನಾಂಕ:05ನೇ ಜುಲೈ, 2023ರಂದು ಶ್ರೀ ಯು.ಬಿ.ವೆಂಕಟೇಶ್ ರವರು ಸೂಚಿಸಿ, ಶ್ರೀ ಎಂ. ನಾಗರಾಜು ರವರು ಅನುಮೋದಿಸಿದ ಕೆಳಕಂಡ ಪ್ರಸ್ತಾವದ ಮೇಲೆ ನಡೆದ ಚರ್ಚೆಗೆ ಸರ್ಕಾರದ ಉತ್ತರ ಮತ್ತು ಅಂಗೀಕರಿಸುವುದು.

> "ದಿನಾಂಕ: 03ನೇ ಜುಲೈ, 2023ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ".

2..

## ೦೩. ವರದಿಯನ್ನೊಪ್ಪಿಸುವುದು

**ಶ್ರೀ ಎಂ.ಕೆ. ಪ್ರಾಣೇಶ್, ಮಾನ್ಯ ಉಪ ಸಭಾಪತಿಯವರು** (ಅಧ್ಯಕ್ಷರು, ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿ) 2023ನೇ ಸಾಲಿನ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ ಮೊದಲನೇ ವರದಿಯನ್ನೊಪ್ಪಿಸುವುದು.

## ೦4. ಸದಸ್ಯರ ಖಾಸಗಿ ಕಾರ್ಯಕಲಾಪ

### ಖಾಸಗಿ ನಿರ್ಣಯ

**ಶ್ರೀ ಯು.ಬಿ. ವೆಂಕಟೇಶ್ ಅವರು ಈ ಕೆಳಕಂಡ ಖಾಸಗಿ ನಿರ್ಣಯದ ಕುರಿತು ಚರ್ಚೆ:-**

"ರಾಜ್ಯದಲ್ಲಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳನ್ನು ಸ್ಥಳೀಯರಿಗೆ ಮೀಸಲಿಡುವ ಕುರಿತಂತೆ ಸಂವಿಧಾನಕ್ಕೆ ತಿದ್ದುಪಡಿ ತರುವ ಉದ್ದೇಶದ ಕುರಿತು" ಮಂಡಿಸಿರುವ ನಿರ್ಣಯದ ಮೇಲೆ ಚರ್ಚೆ.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

---

**ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.**
**www.kla.kar.nic.in/council/council.htm**